# ನಸೀರ್ ಅಹ್ಮದ್ ಮ್ಯಾಚ್ ಫಿಕ್ಸಿಂಗ್ ಆರೋಪಕ್ಕೆ ಸಭಾಪತಿ ಗರಂ

ವಿಧಾನ ಪರಿಷತ್: ವಿಧಾನ ಪರಿಷತ್ ಕಲಾಪದ ವೇಳೆ ಕಾಂಗ್ರೆಸ್ ಸದಸ್ಯ ನಸೀರ್ ಅಹ್ಮದ್ ಅವರ 'ಮ್ಯಾಚ್ ಫಿಕ್ಸಿಂಗ್' ಎಂಬ ಪದದ ಬಳಕೆಗೆ ಸಭಾಪತಿ ಬಸವರಾಜ ಹೊರಟ್ಟಿ ತೀವ್ರ



ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಸದಸ್ಯ ಸಿ.ಟಿ.ರವಿ ಅವರ ವಿವಾದಾಸ್ಪದ ಹೇಳಿಕೆ ಕುರಿತು ನಡೆದ ಚರ್ಚೆಯಲ್ಲಿ, ರವಿ ಗೈರುಹಾಜರಿಯನ್ನು ನಸೀರ್ ಅಹ್ಮದ್ 'ಮ್ಯಾಚ್ ಫಿಕ್ಸಿಂಗ್' ಎಂದು ಕರೆದರು. ಇದರಿಂದ ಕೆರಳಿದ ಸಭಾಪತಿಗಳು, 'ಏಯ್ ನಸೀರ್, ಮ್ಯಾಚ್ ಫಿಕ್ಸಿಂಗ್ ಅಂತ ಮಾತನಾಡುತ್ತೀರಾ? ಬೆರಳು ತೋರಿಸಿ ಮಾತನಾಡಿದರೆ ಹೊರಗೆ ಹಾಕಬೇಕಾಗುತ್ತದೆ' ಎಂದು ಗದರಿದರು. ಸದನದ ಸಮಯ ಹಾಳಾಗುತ್ತಿದೆ ಎಂದು ಗರಂ ಆದ ಸಭಾಪತಿಗಳನ್ನು ಸಭಾನಾಯಕರು ಮಧ್ಯಪ್ರವೇಶಿಸಿ ಸಮಾಧಾನಪಡಿಸಿದರು. ಇದಕ್ಕೂ ಮುನ್ನ, ಪಲಾಯನ ಮಾಡಿರುವ ಸಿ.ಟಿ. ರವಿ ಅವರನ್ನು ಕರೆಸಿ ಅಮಾನತು ಮಾಡಬೇಕು ಎಂದು ಆಡಳಿತ ಪಕ್ಷದ ಸದಸ್ಯರು ಸಭಾಪತಿಗಳಿಗೆ ಮನವಿ ಮಾಡಿದರು.

# ಪರಿಷತ್‌ನಿಂದ 1 ದಿನ ಸಿ.ಟಿ.ರವಿ ಸಸ್ಪೆಂಡ್!

**ಸಿ.ಟಿ.ರವಿಯ 'ಪಾಕಿಸ್ತಾನ ನಾಲಿಗೆ' ಹೇಳಿಕೆಗೆ ಕ್ಷಮೆ ಕೇಳಬೇಕೆಂದು ಪಟ್ಟು | ರಾತ್ರಿ 8 ಗಂಟೆ ಒಳಗೆ ಸದನಕ್ಕೆ ಕರೆಸುವಂತೆ ಸೂಚನೆ ನೀಡಿದ್ದ ಸಭಾಪತಿ**

**ರಾತ್ರಿ 8 ಗಂಟೆಯಾದರೂ ಸದನಕ್ಕೆ ಬಾರದ ರವಿ, ಇಡೀ ದಿನ ಗೈರು | ಯಾವುದೇ ಕಾರಣಕ್ಕೂ ಸದನದೊಳಗೆ ಬಿಡಬೇಡಿ: ಮಾರ್ಷಲ್‌ಗಳಿಗೆ ಸೂಚನೆ**

■ **ಉದಯವಾಣಿ ಸಮಾಚಾರ**

**ವಿಧಾನಪರಿಷತ್:** ತಮ್ಮ ವಿವಾದಾಸ್ಪದ 'ಪಾಕಿಸ್ತಾನ ನಾಲಿಗೆ' ಹೇಳಿಕೆ ಬಗ್ಗೆ ವಿಷಾದಿಸಲು ಒಪ್ಪದ ಬಿಜೆಪಿ ಸದಸ್ಯ ಸಿ.ಟಿ.ರವಿ ಅವರನ್ನು ಒಂದು ದಿನದ ಮಟ್ಟಿಗೆ ಅಮಾನತುಗೊಳಿಸಲಾಗಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಆದೇಶಿಸಿದರು. ಜೊತೆಗೆ, ಯಾವುದೇ ಕಾರಣಕ್ಕೂ ಸಿ.ಟಿ.ರವಿ ಅವರನ್ನು ಸದನದ ಒಳಗೆ ಬರಲು ಅವಕಾಶ ನೀಡಬೇಡಿ ಎಂದು ಮಾರ್ಷಲ್‌ಗಳಿಗೆ ಸೂಚನೆ ನೀಡಿದರು.

ಇದಕ್ಕೂ ಮುನ್ನ ಸಭಾನಾಯಕ ಎನ್.ಎಸ್.ಭೋಸರಾಜು ಅವರು, ವಿಷಾದ ವ್ಯಕ್ತಪಡಿಸದ ಸದಸ್ಯ ಸಿ.ಟಿ.ರವಿ ಅವರನ್ನು ಅಮಾನತು ಮಾಡಬೇಕೆಂದು ಮನವಿ ಮಾಡಿಕೊಂಡರು. ರವಿ ಗೈರಾಗಿದ್ದರಿಂದ ಅವರನ್ನು ಕರೆಸಬೇಕು ಎಂದು ಆಡಳಿತ ಪಕ್ಷದವರು ಆಗ್ರಹಿಸಿದರು. ಆಗ ರವಿ ಅವರನ್ನು ಕರೆಸುವಂತೆ ವಿಪಕ್ಷದ ಸಚೇತಕ ಎನ್.ರವಿಕುಮಾರ್ ಅವರಿಗೆ ಸೂಚಿಸಿದರು.

ಅವರು ಬೇರೆ ಕಾರ್ಯಕ್ರಮದಲ್ಲಿ ಇದ್ದಾರೆ, ಅವರು ಬರುವುದು ತಡವಾಗಲಿದೆ ಎಂದು ತಿಳಿಸಿದರು. ಹಾಗಾದರೆ ರಾತ್ರಿ 8 ಗಂಟೆವರೆಗೆ ಸದನ ನಡೆಸಲಾಗುವುದು. ಅದರೊಳಗೆ ಕರೆಸಿ ಎಂದರು. ಆದರೆ, ರಾತ್ರಿ 8 ಗಂಟೆಯಾದರೂ ಸಿ.ಟಿ.ರವಿ ಸದನಕ್ಕೆ ಬರಲಿಲ್ಲ. ಇದರಿಂದ ಈ ದಿನದ ಮಟ್ಟಿಗೆ ಅವರನ್ನು ಅಮಾನತು ಮಾಡಲಾಗಿದೆ ಎಂದು ಸಭಾಪತಿಗಳು ಪ್ರಕಟಿಸಿದರು. ಅಧಿವೇಶನದ ಕೊನೆಯ ದಿನದ ಮೊದಲಾರ್ಧದಲ್ಲಿ ಕಾಂಗ್ರೆಸ್ ಸದಸ್ಯ ನಸೀರ್ ಅಹಮದ್ ವಿರುದ್ಧ ಬಿಜೆಪಿಯ ಸಿ.ಟಿ.ರವಿ ಬಳಸಿದರೆನ್ನಲಾದ ಆಕ್ಷೇಪಾರ್ಹ ಪದಕ್ಕೆ ಅವರು ಕ್ಷಮೆ ಕೇಳಬೇಕು ಎಂಬ ಆಡಳಿತ ಪಕ್ಷದ ಸದಸ್ಯರ ಪಟ್ಟು ಮತ್ತು ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಮೊನ್ನೆ ಕೆಲವರು ಹೇಳಿದ್ದಕ್ಕೆ ವಿಷಾದ ವ್ಯಕ್ತಪಡಿಸಿದೆ ಎಂಬ ಹೇಳಿಕೆಗೆ ಬಿಜೆಪಿ ಸದಸ್ಯರು ವ್ಯಕ್ತಪಡಿಸಿದ ಆಕ್ರೋಶಕ್ಕೆ ಕಲಾಪ ಆಹುತಿ ಆಯಿತು. ಬುಧವಾರ ಕಲಾಪದ ಆರಂಭದಲ್ಲಿ ನಿಯಮ 330ಎ ಅಡಿ ವಿಚಾರ ಪ್ರಸ್ತಾಪಿಸಲು ಸದಸ್ಯರಿಗೆ ಸಭಾಪತಿಗಳು ಅವಕಾಶ ಮಾಡಿಕೊಟ್ಟರು. ಆ ಬಳಿಕ ಸಭಾ ನಾಯಕ ಎನ್.ಎಸ್.ಭೋಸರಾಜು, ಲಿಖಿತ ಪ್ರಶ್ನೆಗಳಿಗೆ ಮತ್ತು ಗಮನ ಸೆಳೆಯುವ ಸೂಚನೆಗಳ ಉತ್ತರ ಸದನಕ್ಕೆ ಮಂಡಿಸಿದರು.

ಇದಾದ ಬಳಿಕ ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹ್ಮದ್ ಮಾತನಾಡಿ, ಆಕ್ಷೇಪಾರ್ಹ ಪದ ಬಳಸಿದ ಬಿಜೆಪಿ ಸದಸ್ಯ ಸಿ.ಟಿ.ರವಿ ಕ್ಷಮೆ ಕೋರಬೇಕು, ಇಲ್ಲವೇ ಅವರನ್ನು ಸದನದಿಂದ ಹೊರ ಹಾಕಿ. 5 ಬಾರಿ ಪೀಠ ಅವರಿಗೆ ಕ್ಷಮೆ ಕೋರುವಂತೆ ಸೂಚಿಸಿದ್ದರೂ ಅವರು ಕ್ಷಮೆ ಕೋರಿಲ್ಲ ಎಂದು ಒತ್ತಾಯಿಸಿದರು. ಆಡಳಿತ ಪಕ್ಷದ ಸದಸ್ಯರು ಇದಕ್ಕೆ ದನಿಗೂಡಿಸಿದರು.

**ಇದು ಮುಗಿದ ಅಧ್ಯಾಯ:** ಆದರೆ, ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದರು. ಆ ವಿಚಾರ ಈಗಾಗಲೇ ಮುಗಿದ ಅಧ್ಯಾಯ. ಪೀಠ ಆದೇಶ ಮಾಡಿದೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ರವಿ ಅವರು ಬಳಸಿರುವುದು ಅಸಾಂವಿಧಾನಕ ಪದ ಅಲ್ಲ. ಆದರೂ ನೀವು ಕಡತದಿಂದ ತೆಗೆಯುತ್ತೇನೆ ಎಂದಿದ್ದೀರಿ. ಉಳಿದಂತೆ ಅವರ ಆತ್ಮಾವಲೋಕನಕ್ಕೆ ಬಿಡುತ್ತೇನೆ ಎಂದು ಸಭಾಪತಿ ಹೇಳಿದ್ದಾರೆ. ಅವರು ಆ ನಾಲಿಗೆ ಯಾವುದು ಎಂಬುದನ್ನು ಕಂಡು ಹಿಡಿಯಿರಿ ಎಂದು ಪೀಠಕ್ಕೆ ಸಿ.ಟಿ.ರವಿ ಹೇಳಿದ್ದರು. ಅದನ್ನು ತಾವು ಕಂಡು ಹಿಡಿದಿದ್ದೀರಿ. ಅದು ಅಲ್ಲಿಗೆ ಮುಗಿಯಿತು ಎಂದರು.



ಪರಿಷತ್‌ನಲ್ಲಿ ಸಭಾನಾಯಕ ಎನ್.ಎಸ್.ಭೋಸರಾಜು ಮಾತನಾಡಿದರು.

## ಸಚಿವರು ಕೇಳಿದ್ದಕ್ಕೆ ವಿಷಾದ ವ್ಯಕ್ತಪಡಿಸಿದ್ದೆ: ಹರಿಪ್ರಸಾದ್ ಹೇಳಿಕೆಯಿಂದ ಮತ್ತೆ ಗಲಾಟೆ

ಬಿಜೆಪಿಯ ಡಿ.ಎಚ್.ಅರುಣ್ ಮಾತನಾಡಿ, ಬಿ.ಕೆ.ಹರಿಪ್ರಸಾದ್ ವಿಷಾದ ವ್ಯಕ್ತಪಡಿಸಿದ್ದರು ಎಂದು ಹೇಳಿದಾಗ ಅದಕ್ಕೆ ತಿರುಗೇಟು ನೀಡಲು ಮುಂದಾದ ಬಿ.ಕೆ.ಹರಿಪ್ರಸಾದ್, ನಾನು ಮೊನ್ನೆ ಸಭಾ ನಾಯಕರು, ಕಾನೂನು ಸಚಿವರು ಮತ್ತು ಸಲೀಂ ಅಹ್ಮದ್ ಹೇಳಿದ್ದಕ್ಕೆ ವಿಷಾದ ವ್ಯಕ್ತಪಡಿಸಿದ್ದೇನೆ ಎಂದು ಹೇಳಿದರು. ಇದು ಬಿಜೆಪಿ ಸದಸ್ಯರನ್ನು ಕೆರಳಿಸಿತು. ಬಿ ಕೆ ಹರಿಪ್ರಸಾದ್ ಅವರ ಹೇಳಿಕೆಯನ್ನು ಕಡತದಿಂದ ತೆಗೆಯುವಂತೆ ಆಗ್ರಹಿಸಿದರು. ನನಗೆ ಸಮಯ ಅವಕಾಶ ನೀಡಿ ಎಂದು ಸಭಾಪತಿ ಹೊರಟ್ಟಿ ಅವರು ತಮ್ಮ ಕೊಠಡಿಗೆ ತೆರಳಿದರು. ಉಪಸಭಾಪತಿ ಎಂ.ಕೆ.ಪ್ರಾಣೇಶ್ ಸದನ ನಡೆಸಲು ಪ್ರಯತ್ನಿಸಿದರೂ ಈ ಕಗ್ಗಂಟಿಗೆ ಪರಿಹಾರ ಸಿಗದ ಹಿನ್ನೆಲೆಯಲ್ಲಿ ಮಧ್ಯಾಹ್ನದ ಬಳಿಕಕ್ಕೆ ಕಲಾಪವನ್ನು ಮುಂದೂಡಿದರು.

## ರವಿಗೆ ಕ್ಷಮೆ ಕೇಳುವಂತೆ 5 ಬಾರಿ ಹೇಳಿದ್ದ ಪೀಠ: ಎಚ್‌ಕೆಪಿ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಮಾತನಾಡಿ, ನಾವು ಮಂಗಳವಾರ ಕಲಾಪದಲ್ಲಿ ಹೇಳಿದ್ದೆವು. ಅಲ್ಲದೆ, ಪೀಠ ಸಹ ಈ ಬಗ್ಗೆ 5 ಬಾರಿ ಮಾರ್ಗದರ್ಶನ ಮಾಡಿದೆ. ಗೌರವಾನ್ವಿತರಿಗೆ ಬಳಸಬಹುದಾದ ಪದ ಬಳಸಿ ಹೇಳಿದೆ. ಪೀಠ ಮನವಿ ಮಾಡುವುದು ಅಂದರೆ ಏನು? ಸಭಾಪತಿಗಳು ಹೇಳಿದರು. ಸಭಾಪತಿ ಮನವಿ ಮಾಡಿದರು ಅಂದರೆ, ಅದು ಆದೇಶ ಮಾಡಿದ ಹಾಗೆ. ಸದನದಲ್ಲಿ ಎಲ್ಲದಕ್ಕೂ ಶಿಷ್ಟಾಚಾರ ಇವೆ. ಪೀಠ ಮನವಿ ಮಾಡುತ್ತದೆ. ಇದಕ್ಕೂ ಮೊದಲು ಅಂದರೆ ನೀವು ನಿರ್ಧಾರ ಮಾಡಬೇಕು. ನಸೀರ್ ಅವರಿಗೆ ಸಭಾಪತಿ ಹೇಳಿದ ತಕ್ಷಣ ಕ್ಷಮೆ ಯಾಚಿಸಿದರು. ನಸೀರ್ ಅವರಿಗೆ ಅವರದ್ದೇ ಆದ ವಾದವಿತ್ತು. ಈಗ ನೀವು ಕ್ಷಮೆ ಕೇಳಬೇಕಲ್ಲವೇ? ಇದನ್ನು ಮುಂದುವರಿಸುವುದರಲ್ಲಿ ಅರ್ಥ ಇಲ್ಲ. ಅವರ ನಡೆ ಸದನಕ್ಕೆ ಉಚಿತವಲ್ಲ ಎಂದು ಹೇಳಿದರು. ಆದರೆ, ಇದಕ್ಕೆ ಆಕ್ಷೇಪಿಸಿದ ಛಲವಾದಿ ನಾರಾಯಣಸ್ವಾಮಿ, ನಜೀರ್ ಮಾಡಿದ್ದು ಘನ ಕಾರ್ಯ ಎನ್ನುವ ರೀತಿ ಸಮರ್ಥನೆ ಮಾಡುತ್ತಿದ್ದೀರಿ. ಪ್ರಧಾನಿ ಯನ್ನು ಟೀಕಿಸುವುದು ಎಷ್ಟು ಸರಿ? ಇದು ಮುಗಿದಿದೆ. ಈಗಾಗಲೇ ಸದನ ಆರಂಭ ಕೂಡ ಆಗಿದೆ. ಮುಂದೆ ಹೋಗಿದೆ ಹಿಂದೆ ಬರುವುದು ಬೇಡ ಎಂದು ಮನವಿ ಮಾಡಿರು. ಬಿಜೆಪಿ ಸದಸ್ಯರು ಸದನ ಮುಂದುವರಿಸಿ ಎಂದು ಕೋರಿದರು. ಆದರೆ, ಕಾಂಗ್ರೆಸ್ ಸದಸ್ಯರು ಸಿ.ಟಿ.ರವಿ ಕ್ಷಮೆಗೆ ಪಟ್ಟು ಹಿಡಿದರು.